ಕತೆ

ಪಿ.ಪಿ. ಉಪಾಧ್ಯ
ಕಲೆ: ಮುರಳೀಧರ ರಾಠೋಡ್

# ಅಪ್ಪ

ತಿಂಗಳ ಮೇಲೆ ಆಸ್ಪತ್ರೆಯಲ್ಲಿ ಮಲಗಿದ್ದ ಅಪ್ಪ 'ಸಾವಿನ ಅಂಚಿನಲ್ಲಿದ್ದಾರೆ' ಎಂದು ಡಾಕ್ಟರು ಹೇಳಿ ವಾರವೇ ಕಳೆಯುತ್ತ ಬಂದಿದೆ. ಪಕ್ಕದಲ್ಲೇ ಕುಳಿತ ಇವ ಮಂಚದ ಮೇಲೆ ಮಲಗಿದ್ದ ಅಪ್ಪನನ್ನೇ ನೋಡುತ್ತ ಊಟ ತಿಂಡಿಯನ್ನೂ ಬಿಟ್ಟು ಕಾಯುತ್ತಿದ್ದಾನೆ. ಅವರು ಸಾಯುವದನ್ನಲ್ಲ. ಏನಾದರೂ ಮಾತನಾಡಬಹುದು... ಕೇಳಬಹುದು... ಅವರ ಮಾತಿಗೆ ಉತ್ತರ ಕೊಡಬೇಕು... ಅವರು ಕೇಳಿದ್ದನ್ನು ಕೊಡಬೇಕು... ಹಾಗಾಗಿ, ಸಂಕಟಪಡುತ್ತ ಅವರನ್ನೇ ನೋಡುತ್ತ ಕುಳಿತಿದ್ದವ ಅವರು ಉಸಿರಾಟಕ್ಕೆ ಕಷ್ಟಪಡುತ್ತಿದ್ದುದನ್ನು ಗಮನಿಸಿದವನೇ ಡಾಕ್ಟರನ್ನು ಕರೆದಿದ್ದ. ಅವರು ಬಂದು ನೋಡಿದವರು, 'ಇನ್ನು ಇಷ್ಟೇ ಇವರೆ... ಎಷ್ಟು ದಿನ ಇರುತ್ತಾರೋ ಅಷ್ಟೇ ದಿನ. ನಾವು ಮಾಡುವುದನ್ನೆಲ್ಲ ಮಾಡಿ ಆಯ್ತು. ಇನ್ನೇನೂ ಉಳಿದಿಲ್ಲ.' ಇವ ಒತ್ತರಿಸಿ ಬರುತ್ತಿದ್ದ ದುಃಖವನ್ನು ತಡೆ ಹಿಡಿದುಕೊಳ್ಳುವ ಪ್ರಯತ್ನ ಮಾಡುತ್ತ ತಲೆಯನ್ನು ಕೆಳಹಾಕಿ ಹಾಗೆಯೇ ಕುಳಿತ.

ಅಮ್ಮನಂತೂ ಪೂರ್ಣ ಹೈರಾಣಾಗಿದ್ದಾಳೆ. ಇವರೊಂದಿಗೇ ಬದುಕನ್ನು ಕಳೆದ ಅವಳಿಗೆ ಇವರ ಈಗಿನ ಸ್ಥಿತಿಯನ್ನು ಜೀರ್ಣಿಸಿಕೊಳ್ಳಲಿಕ್ಕೇ ಆಗುತ್ತಿಲ್ಲ. 'ಯಾರಾದರೂ ಎಷ್ಟು ದಿನ ಬದುಕುತ್ತಾರೆ. ಎಲ್ಲ ಒಂದಲ್ಲ ಒಂದು ದಿನ ಹೋಗಲೇಬೇಕಲ್ಲವೇ. ಇವತ್ತು ಅವರು ನಾಳೆ ನಾನು, ಅಷ್ಟೆ. ಹೆಚ್ಚೆಂದರೆ ಇನ್ನೊಂದೆರಡು ದಿನ ಬದುಕಿಯಾರು' ಎಂದು ಡಾಕ್ಟರು ಹಿಂದಿನ ದಿನವಷ್ಟೇ ಅವಳೆದುರಿಗೇ ಹೇಳಿದ್ದನ್ನು ಕೇಳಿಸಿಕೊಂಡವಳ ಪ್ರತಿಕ್ರಿಯೆ. ತನ್ನಷ್ಟಕ್ಕೇ ಹೇಳಿಕೊಳ್ಳುತ್ತಿದ್ದಳೋ ಎನ್ನುವಂತೆ ಆಕೆ ಮಾತಾಡಿಕೊಂಡದ್ದು ಇವನಿಗೆ ಮಾತ್ರ ಸ್ಪಷ್ಟವಾಗಿ ಕೇಳಿಸಿತ್ತು. ಇವನಿಗೆ ಇದ್ದದ್ದೂ ಗಡಿಬಿಡಿಯಾಗಿತ್ತು. ತಿಂಗಳು ದಿನಗಳಿಂದ ಅಪ್ಪನನ್ನು ಇದೇ ಸ್ಥಿತಿಯಲ್ಲಿ ನೋಡುತ್ತ ಬಂದು ಆಗಲೇ ನೋವಿನಿಂದ ಸೋತಿದ್ದ ಅವ ಅಮ್ಮನ ಮಾತು ಕೇಳಿ ದಂಗು ಬಡಿದಿದ್ದ. 'ಯಾಕೆ ಅಮ್ಮನೂ ಹೀಗೆ ಮಾತಾಡುತ್ತಿದ್ದಾಳೆ... ಅವಳೂ ತನ್ನ ಕೊನೆಯ ದಿನಗಳ ಲೆಕ್ಕ ಹಾಕಲು ಪ್ರಾರಂಭಿಸಿರಬಹುದೇ...' ಸಂಶಯ ಮೂಡಿದ್ದೇ ಇವನಿಗೂ ಕೈ ಕಾಲು ಬಿಡುವಂತಾಗಿತ್ತು.

ಆದರೂ ಅಮ್ಮನನ್ನು ಸಮಾಧಾನಿಸಲು ನೋಡಿದ. 'ಇಲ್ಲ ಅಮ್ಮ... ಅಪ್ಪನನ್ನು ಬೇಕಾದರೆ ಬೇರೆ ಆಸ್ಪತ್ರೆಗೆ ತೆಗೆದುಕೊಂಡು ಹೋಗುವ... ಇಲ್ಲಿಗಿಂತ ಒಳ್ಳೆಯ ಡಾಕ್ಟರುಗಳು ಇರುವಂಥ ಆಸ್ಪತ್ರೆಯನ್ನು ಹುಡುಕೋಣ' ಎಂದ. ಕೇಳಿಸಿಕೊಂಡ ಅಮ್ಮ ಮುಖವೆತ್ತಿದಳು. ಇವನ ಕಡೆಗೆ ನೋಡುತ್ತ ತೀರ ನಿರಾಸೆಯ ಧ್ವನಿಯಲ್ಲಿ ಹೇಳಿದಳು. 'ಅಲ್ಲಿಯ ವರೆಗೆ ಬದುಕುತ್ತಾರೇನಪ್ಪ ಇವರು... ನೋಡು ಈಗಲೇ ಉಸಿರಾಡಲು ಕಷ್ಟ ಪಡುತ್ತಿದ್ದಾರೆ...' ಆಕೆಯ ಮಾತನ್ನು ಕೇಳಿದ ಇವ ಇನ್ನೂ ಹತ್ತಿರಕ್ಕೆ ಬಂದು ಅಪ್ಪನ ಮುಖವನ್ನೇ ಗಮನಿಸಲಿಕ್ಕೆ ಹತ್ತಿದ. ಹೌದು... ಅಪ್ಪ ತಡೆದು ತಡೆದು ಉಸಿರಾಡುತ್ತಿದ್ದರು.